## ಸಾರಿಗೆ ಸಂಸ್ಥೆಗಳ ನೌಕರರ ಬೇಡಿಕೆಗಳ ಕುರಿತು ತೆಗೆದುಕೊಂಡಿರುವ ಕ್ರಮ ಮತ್ತು ಹೊರಡಿಸಿರುವ ಆದೇಶಗಳು (ಸಿಬ್ಬಂದಿಗಳ ಮಾಹಿತಿಗಾಗಿ)

| ಕ್ರ.ಸಂ | ಬೇಡಿಕೆ | ಷರಾ |
|---|---|---|
| 1 | ಸಾರಿಗೆ ಸಂಸ್ಥೆಯ ನೌಕರರಿಗೆ ಆರೋಗ್ಯ ಭಾಗ್ಯ/ ಜ್ಯೋತಿಸಂಜೀವಿನಿ ವಿಮಾ ಯೋಜನೆಯನ್ನು ಅಳವಡಿಸುವ ಕುರಿತು. | ಸರ್ಕಾರದ ಮಾದರಿಯಲ್ಲಿ ನಿಗಮದ ನೌಕರರು ಚಿಕಿತ್ಸೆ ಪಡೆದ ಆಸ್ಪತ್ರೆಯ ದರ್ಜೆಗೆ ಅನುಗುಣವಾಗಿ ಅಂದರೆ, ಎನ್.ಎ.ಬಿ.ಹೆಚ್ ದರ್ಜೆಯ ಖಾಸಗಿ ಆಸ್ಪತ್ರೆ ಆಗಿದ್ದಲ್ಲಿ ಸಿ.ಜಿ.ಹೆಚ್.ಎಸ್-2014 ಎನ್.ಎ.ಬಿ.ಹೆಚ್ ದರದಲ್ಲಿ ಮತ್ತು ನಾನ್-ಎನ್.ಎ.ಬಿ.ಹೆಚ್ ದರ್ಜೆಯ ಆಸ್ಪತ್ರೆ ಆಗಿದ್ದಲ್ಲಿ ಸಿ.ಜಿ.ಹೆಚ್.ಎಸ್-2014 ನಾನ್-ಎನ್.ಎ.ಬಿ.ಹೆಚ್ ದರದಲ್ಲಿ ಲೆಕ್ಕ ಪರಿಶೀಲನೆ ಮಾಡಿ ಅರ್ಹ ಮೊತ್ತವನ್ನು ಮರುಪಾವತಿಸಲು ಆದೇಶ ಹೊರಡಿಸಲಾಗಿದೆ ಮತ್ತು ಈ ಪದ್ಧತಿಯು ದಿನಾಂಕ.01.04.2021ರಿಂದ ಜಾರಿಗೆ ಬರುತ್ತದೆ.<br><br>ಸರ್ಕಾರದಲ್ಲಿ ಇರುವ ಜ್ಯೋತಿ ಸಂಜೀವಿನಿ ಯೋಜನೆಯ ಸಾಧಕ ಬಾಧಕಗಳನ್ನು ಪರಿಶೀಲಿಸಲಾಗಿದೆ. ಸರ್ಕಾರವು "ಆರೋಗ್ಯ ಸಿರಿ" ಯೋಜನೆಯನ್ನು ಜಾರಿಗೆ ತಂದ ಪಕ್ಷದಲ್ಲಿ, ಅದರ ಸಾಧಕ ಬಾಧಕಗಳನ್ನು ಗಣನೆಗೆ ತೆಗೆದುಕೊಂಡು ನಿಗಮದಲ್ಲಿ ಅಳವಡಿಸಿಕೊಳ್ಳಲು ಪರಿಶೀಲಿಸಲಾಗುವುದು. |
| 2 | ಕೋವಿಡ್-19 ಸೋಂಕು ತಗುಲಿದ ನಿಗಮದ ನೌಕರರು ಮರಣ ಹೊಂದಿದ ಸಂದರ್ಭದಲ್ಲಿ ಅವರ ಕುಟುಂಬಗಳಿಗೆ ಸರ್ಕಾರಿ ನೌಕರರಿಗೆ ನೀಡಿದಂತೆ ರೂ.30 ಲಕ್ಷ ಪರಿಹಾರ ನೀಡುವ ಕುರಿತು. | ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಮೃತಪಟ್ಟ ನಿಗಮದ ನೌಕರರ ಪೈಕಿ 07 ನೌಕರರ ಕುಟುಂಬದವರಿಗೆ ದಿನಾಂಕ: 26-02-2021 ರಂದು ಸನ್ಮಾನ್ಯ ಮುಖ್ಯಮಂತ್ರಿ ರವರಿಂದ ತಲಾ ರೂ.30 ಲಕ್ಷಗಳ ಚೆಕ್‌ಗಳನ್ನು ನೀಡಲಾಗಿದೆ.<br><br>ಉಳಿದ ಪ್ರಕರಣಗಳನ್ನು ನಿಯಮಾನುಸಾರಿ ಪರಿಶೀಲಿಸಿ, ಅರ್ಹ ಪ್ರಕರಣಗಳಲ್ಲಿ ಪರಿಹಾರವನ್ನು ಮಂಜೂರು ಮಾಡಲು ಕ್ರಮ ವಹಿಸಲಾಗುವುದು. |
| 3 | ನಿಗಮದಲ್ಲಿ ಹೆಚ್.ಆರ್.ಎಂ.ಎಸ್ (ಮಾನವ ಸಂಪನ್ಮೂಲ) ವ್ಯವಸ್ಥೆಯನ್ನು ಜಾರಿಗೊಳಿಸುವ ಕುರಿತು. | ಸಾರಿಗೆ ಸಂಸ್ಥೆಗಳಲ್ಲಿ (HRMS) ಹೆಚ್.ಆರ್.ಎಂ.ಎಸ್ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು, ಕೆಳಕಂಡ ಪ್ರಮುಖ ಅಂಶಗಳನ್ನು ಒಳಗೊಂಡಿರುತ್ತದೆ :<br>1. ರಜೆ ನಿರ್ವಹಣೆ ಮತ್ತು ಡ್ಯೂಟಿ ರೋಟಾ ಪದ್ದತಿ<br>2. ಭವಿಷ್ಯನಿಧಿ / ಐಚ್ಛಿಕ ಭವಿಷ್ಯ ನಿಧಿ ಮಾಹಿತಿ<br>3. ನೌಕರರ ಕುಂದು ಕೊರತೆ ನಿವಾರಣೆ<br>4. ವರ್ಗಾವಣೆ ತಂತ್ರಾಂಶ ಮತ್ತು ಪೇ ರೋಲ್ ವ್ಯವಸ್ಥೆ<br>5. ಐಟಿಎಸ್ ವ್ಯವಸ್ಥೆಯಡಿ ನೌಕರರ ಮೇಲೆ |

| | | |
|---|---|---|
| | | ದಾಖಲಿಸಬಹುದಾದ ನಕಲಿ ಅಪಘಾತ ಪ್ರಕರಣಗಳನ್ನು ತಪ್ಪಿಸಬಹುದು. |
| 4 | ಸಿಬ್ಬಂದಿಯು ಕರ್ತವ್ಯ ನಿರ್ವಹಿಸಿದ ಸಂದರ್ಭದಲ್ಲಿ ಭತ್ಯೆಯನ್ನು (ಬಾಟಾ) ನೀಡುವ ಕುರಿತು. | ನಿಗಮದ ಸಿಬ್ಬಂದಿಗಳು ದಿನದ ಕರ್ತವ್ಯದ ಸಲುವಾಗಿ ಅರ್ಹ ವಿವಿಧ ಭತ್ಯೆಗಳು ಮತ್ತು ಬಾಟಾಗಳು ಹಾಗೂ ಮಾಸಿಕ ಭತ್ಯೆಗಳನ್ನು ದಿನಾಂಕ.01.03.2021 ರಿಂದ ಜಾರಿಗೆ ಬರುವಂತೆ ನೀಡಲು ಸೂಚಿಸಿ ಆದೇಶವನ್ನು ಈಗಾಗಲೇ ಹೊರಡಿಸಲಾಗಿದೆ ಮತ್ತು ಅದರಂತೆ ಕ್ರಮ ಜಾರಿಯಲ್ಲಿದೆ. |
| 5 | ಘಟಕದ ವ್ಯಾಪ್ತಿಯಲ್ಲಿ ನೌಕರರಿಗೆ ಕಿರುಕುಳ ತಪ್ಪಿಸಲು ಸೂಕ್ತ ಆಡಳಿತ ವ್ಯವಸ್ಥೆ ಜಾರಿಗೆ ತರುವ ಕುರಿತು. | 1. ಚಾಲಕ ನಿರ್ವಾಹಕರಿಗೆ ಅನುಸೂಚಿಗಳ ನಿಗಧಿ ವಿಚಾರದಲ್ಲಿ ಏಕರೀತಿಯ ಅಂಶಗಳನ್ನು ಅನುಸರಿಸಲು ಸಿಇಟಿ ಮಾದರಿಯಲ್ಲಿ ಕರ್ತವ್ಯ ನಿಯೋಜನೆಯ ಪದ್ಧತಿಯನ್ನು ದಿನಾಂಕ:–01.02.2021 ರಿಂದ ಎಲ್ಲಾ ಸಾರಿಗೆ ನಿಗಮಗಳಲ್ಲಿ ಜಾರಿಗೆ ತರಲಾಗಿದೆ.<br>2. ನೌಕರರಿಗೆ ರಜಾ ಮಂಜೂರಾತಿ ಕುರಿತಂತೆ ಪಾರದರ್ಶಕ ಮತ್ತು ತಂತ್ರಾಂಶ ಆಧಾರಿತ ರಜಾ ನಿರ್ವಹಣಾ ವ್ಯವಸ್ಥೆ ಜಾರಿಗೆ ತರಲಾಗಿದೆ. ಈ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸಲು ನಿರ್ದೇಶನಗಳನ್ನು ನೀಡಿದ್ದು, ಅದರಂತೆ ಕ್ರಮ ಜಾರಿಯಲ್ಲಿದೆ.<br>3. ನೌಕರರ ಸೇವಾ ಸಂಬಂಧಿತ ಕುಂದುಕೊರತೆ/ಸಮಸ್ಯೆಗಳನ್ನು ಪರಿಶೀಲಿಸಿ, ಬಗೆಹರಿಸುವ ಪದ್ಧತಿ ಜಾರಿಯಲ್ಲಿದ್ದು, ಅದನ್ನು ಕಟ್ಟುನಿಟ್ಟಾಗಿ/ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ. ಅದರಂತೆ, ವಿಭಾಗಗಳ ಅಧಿಕಾರಿಗಳ ತಂಡವು ಘಟಕಗಳಿಗೆ ಭೇಟಿ ನೀಡಿ ನೌಕರರ ಕುಂದುಕೊರತೆಗಳನ್ನು ಪಡೆದು, ಪರಿಶೀಲಿಸಿ ಬಗೆಹರಿಸುವ ಪದ್ಧತಿ ನಿರಂತರವಾಗಿ ನಡೆಯುತ್ತಿದೆ.<br>4. ತನಿಖಾ ಕಾರ್ಯದಲ್ಲಿ ಪಾರದರ್ಶಕತೆಯನ್ನು ತರುವ ಸಲುವಾಗಿ ತನಿಖಾ ಸಿಬ್ಬಂದಿಗಳಿಗೆ ಕಡ್ಡಾಯವಾಗಿ body camera ವನ್ನು ಬಳಸುವಂತೆ ನಿರ್ದೇಶನಗಳನ್ನು ದಿನಾಂಕ.03.02.2021 ರಂತೆ ನೀಡಲಾಗಿದೆ ಮತ್ತು ಅದರಂತೆ ಕ್ರಮ ಜಾರಿಯಲ್ಲಿದೆ.<br>5. ಅಲ್ಲದೇ, HRMS ತಂತ್ರಾಂಶ ಆಧಾರಿತ ಕುಂದುಕೊರತೆಗಳ ನಿವಾರಣೆಯ ಉಪಕ್ರಮವನ್ನು (Grievance Redressal Mechanism) ಅಳವಡಿಸಿಕೊಳ್ಳಲಾಗುವುದು. |
| 6 | ಎನ್.ಐ.ಎನ್.ಸಿ (ನಾಟ್ ಇಶ್ಯೂಡ್ – ನಾಟ್ ಕಲೆಕ್ಟೆಡ್) ಪದ್ಧತಿಯನ್ನು ಪುನರ್ ಪರಿಶೀಲಿಸಿ ಸೂಕ್ತ ವ್ಯವಸ್ಥೆ ಅಳವಡಿಸಿಕೊಳ್ಳುವ ಕುರಿತು. | NINC (Not Issued Not Collected) ಪ್ರಕರಣಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮದ ಕುರಿತು ಪರಿಷ್ಕೃತ ನಿರ್ದೇಶನಗಳ ಆದೇಶವನ್ನು ದಿನಾಂಕ.02.03.2021 ರಂದು ಹೊರಡಿಸಲಾಗಿದೆ ಮತ್ತು ಅದರಂತೆ ಕ್ರಮ ಜಾರಿಯಲ್ಲಿದೆ.<br><br>ಅಲ್ಲದೇ, ತನಿಖಾ ಕಾರ್ಯದಲ್ಲಿ ಪಾರದರ್ಶಕತೆಯನ್ನು ತರುವ ಸಲುವಾಗಿ ತನಿಖಾ ಸಿಬ್ಬಂದಿಗಳಿಗೆ ಕಡ್ಡಾಯವಾಗಿ body camera ವನ್ನು ಬಳಸುವಂತೆ ನಿರ್ದೇಶನಗಳನ್ನು ದಿನಾಂಕ.03.02.2021 ರಂತೆ |

| | | |
|---|---|---|
| | | ನೀಡಲಾಗಿದೆ ಮತ್ತು ಅದರಂತೆ ಕ್ರಮ ಜಾರಿಯಲ್ಲಿದೆ. |
| 7 | ಅಂತರ್ ನಿಗಮ ವರ್ಗಾವಣೆ ಕುರಿತು. | "ಅಂತರ ನಿಗಮ ವರ್ಗಾವಣೆ ನೀತಿ" ಯನ್ನು ಜಾರಿಗೆ ತರುವ ಕುರಿತು ಸರ್ಕಾರವು ದಿನಾಂಕ.09.03.2021 ರಂದು ಆದೇಶವನ್ನು ಹೊರಡಿಸಿದ್ದು, ಅದರನ್ವಯ ಅರ್ಜಿಗಳನ್ನು ಆನ್‌ಲೈನ್ ಮೂಲಕ ದಿನಾಂಕ.01.04.2021 ರಿಂದ ಜಾರಿಗೆ ಬರುವಂತೆ ಪಡೆದುಕೊಳ್ಳಲು ಆಡಳಿತಾತ್ಮಕ ಕ್ರಮ ವಹಿಸಲಾಗುತ್ತಿದೆ. |
| 8 | ತರಬೇತಿಯಲ್ಲಿರುವ ನೌಕರರನ್ನು ತರಬೇತಿ ಅವಧಿಯನ್ನು 02 ವರ್ಷದಿಂದ 01 ವರ್ಷಕ್ಕೆ ಇಳಿಸುವ ಕುರಿತು. | ತರಬೇತಿ ಅವಧಿಯನ್ನು ಪ್ರಸ್ತುತ ಇರುವ 02 ವರ್ಷಗಳಿಂದೆ 01 ವರ್ಷಕ್ಕೆ ಇಳಿಸಲು ಆದೇಶಿಸಿ ಸರ್ಕಾರವು ದಿನಾಂಕ.16.03.2021 ರಂದು ಆದೇಶವನ್ನು ಹೊರಡಿಸಿರುತ್ತದೆ ಮತ್ತು ಅದರಂತೆ, ಆಡಳಿತಾತ್ಮಕ ಕ್ರಮ ವಹಿಸಿಲಾಗುವುದು. |
| 9 | 06ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಪರಿಗಣಿಸುವ ಕುರಿತು ಸರ್ಕಾರವು ಆರ್ಥಿಕ ಅಂಶಗಳನ್ನು ಪರಿಗಣಿಸಿ ತೀರ್ಮಾನಿಸುವ ಕುರಿತು. | ಈ ಸಂಬಂಧ ರಚಿಸಲಾದ ಆಂತರಿಕ ಸಮಿತಿಯು ಈಗಾಗಲೇ ಆರು ಸಭೆಗಳನ್ನು ನಡೆಸಿ, ಪರಿಶೀಲಿಸಿದೆ.<br>ಅಲ್ಲದೇ, ಈ ಕುರಿತು ನಿಗಮಮಟ್ಟದ ಎಲ್ಲಾ ಕಾರ್ಮಿಕ ಸಂಘಟನೆಗಳೊಂದಿಗೆ ಸಭೆ ನಡೆಸಿ, ಅವರ ಅಭಿಪ್ರಾಯ / ಸಲಹೆಗಳನ್ನು ಸಹ ಕೇಳಲಾಗಿದೆ. ಹಲವು ಕಾರ್ಮಿಕ ಸಂಘಟನೆಗಳು ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ(ರಿ) ರವರು ಹೆಚ್ಚಿನ ಅಭಿಪ್ರಾಯ / ಸಲಹೆಗಳನ್ನು ನೀಡಲು ಸಮಯಾವಕಾಶ ಕೋರಿರುತ್ತಾರೆ. |